# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 540 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮುನಿರಾಜಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿಗಳೆಷ್ಟು; (ಅವುಗಳಲ್ಲಿ ಎಪಿಎಲ್, ಬಿಪಿಎಲ್ ಮತ್ತು ಅಂತ್ಯೋದಯದ ವಿವರವನ್ನು ಪ್ರತ್ಯೇಕವಾಗಿ ನೀಡುವುದು) | ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿಗಳ ವಿವರ ಈ ಕೆಳಕಂಡಂತಿವೆ. (see table below) |
| ಆ | ಸದರಿ ಕಾರ್ಡ್‌ಗಳಿಗೆ ಕೇಂದ್ರ ಸರ್ಕಾರ ನೀಡುತ್ತಿರುವ ಆಹಾರ ಧಾನ್ಯವೆಷ್ಟು; (ಕೆ.ಜಿ ಅಥವಾ ಟನ್ ಗಳಲ್ಲಿ ವಿವರ ನೀಡುವುದು) | ಕೇಂದ್ರ ಸರ್ಕಾರದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲು ಪ್ರತಿ ಮಾಹೆ 2,17,403 ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಉಚಿತವಾಗಿ ರಾಜ್ಯಕ್ಕೆ ಬಿಡುಗಡೆ ಮಾಡಲಾಗುತ್ತಿದೆ.<br>ರಾಜ್ಯ ಸರ್ಕಾರದ ವತಿಯಿಂದ ಹೆಚ್ಚುವರಿ ಆದ್ಯತಾ ಪಡಿತರ ಚೀಟಿಗಳ ಫಲಾನುಭವಿಗಳಿಗೆ ಪ್ರತಿ ಮಾಹೆ ಅಗತ್ಯವಿರುವ ಅಂದಾಜು 20,000 ಮೆಟ್ರಿಕ್ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರದ ಸಂಸ್ಥೆಗಳಾದ ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರ್ ಗಳಿಂದ ಪ್ರಸ್ತುತ ಪ್ರತಿ ಕೆ.ಜಿ. ಗೆ ರೂ. 34.60 ದರದಲ್ಲಿ ಖರೀದಿಸಲಾಗುತ್ತಿದೆ.<br>ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುವ ರಾಗಿ ಮತ್ತು ಜೋಳವನ್ನು ಲಭ್ಯತೆಗೆ ಅನುಗುಣವಾಗಿ ವಿತರಿಸಲಾಗುತ್ತಿದೆ. |
| ಇ | ಆಹಾರ ಧಾನ್ಯಕ್ಕೆ ಬದಲಾಗಿ ರಾಜ್ಯ ಸರ್ಕಾರ ನೀಡುತ್ತಿರುವ | ಅನ್ನ ಭಾಗ್ಯ ಯೋಜನೆಯಡಿ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ರಾಷ್ಟ್ರೀಯ ಆಹಾರ ಭದ್ರತಾ |

| ಪಡಿತರ ಚೀಟಿಯ ವಿಧ | ಪಡಿತರ ಚೀಟಿ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|
| ಅಂತ್ಯೋದಯ ಅನ್ನ ಯೋಜನಾ | 10,84,694 | 44,02,005 |
| ಆದ್ಯತಾ ಪಡಿತರ ಚೀಟಿ | 1,16,66,233 | 3,94,18,190 |
| ಆದ್ಯತೇತರ ಪಡಿತರ ಚೀಟಿ | 25,00,665 | 85,78,342 |
| ಒಟ್ಟು | 1,52,51,592 | 5,23,98,537 |

ಹಣವೆಷ್ಟು; (ಪ್ರತಿ ತಿಂಗಳು ನೀಡುತ್ತಿರುವ ಹಣದ ವಿವರ ನೀಡುವುದು);

ಕಾರ್ಯ್ಯೆಯನ್ವಯ ವಿತರಿಸಲಾಗಿರುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ಹೆಚ್ಚುವರಿಯಾಗಿ 5 ಕೆ.ಜಿ ಆಹಾರ ಧಾನ್ಯವನ್ನು ಸೇರಿಸಿ ಪ್ರತಿ ಫಲಾನುಭವಿಗೆ 10 ಕೆ.ಜಿ ಆಹಾರ ಧಾನ್ಯವನ್ನು ವಿತರಿಸಲು ಬದ್ಧವಾಗಿದ್ದು, ಪ್ರಸ್ತುತ ಈ ಯೋಜನೆಗೆ ಅಗತ್ಯವಿರುವ ಆಹಾರ ಧಾನ್ಯ ಲಭ್ಯವಾಗುವವರೆಗೆ ರಾಜ್ಯದ ಅರ್ಹ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು ಹೆಚ್ಚುವರಿ 5 ಕೆ.ಜಿ ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ ರೂ.34/- ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಹಣ ಪಾವತಿಸಲಾಗುತ್ತಿದೆ. ಅದಕ್ಕಾಗಿ ಈಗಾಗಲೇ ಒಟ್ಟು ರೂ.4411.55 ಕೋಟಿ ಮೊತ್ತದ ಹಣವನ್ನು ಜನವರಿ-2024 ರ ಮಾಹೆ ಅಂತ್ಯಕ್ಕೆ ಕೋಟಿ ಅರ್ಹ ಫಲಾನುಭವಿಗಳವರೆಗೆ ಸದರಿ ಯೋಜನೆಯಡಿ ವರ್ಗಾಯಿಸಲಾಗುತ್ತಿದ್ದು, ,ಮಾಹೆವಾರು ವಿವರಗಳ ಈ ಕೆಳಕಂಡಂತಿದೆ.

| ಕ್ರ.ಸಂ | ಮಾಹೆ | DBT ಯೋಜನೆಗೆ ಅರ್ಹರಿರುವ ಪಡಿತರ ಚೀಟಿಗಳ ಸಂಖ್ಯೆ | DBT ಯೋಜನೆಗೆ ಅರ್ಹರಿರುವ ಫಲಾನುಭವಿಗಳ ಸಂಖ್ಯೆ | ಒಟ್ಟು ವರ್ಗಾವಣೆ ಮಾಡಿರುವ ಹಣ ರೂ. ಕೋಟಿಗಳಲ್ಲಿ |
|---|---|---|---|---|
| 1 | ಜುಲೈ-2023 | 97,27,165 | 3,45,38,958 | 566.05 |
| 2 | ಆಗಸ್ಟ್-2023 | 1,03,68,897 | 3,69,36,906 | 605.88 |
| 3 | ಸೆಪ್ಟೆಂಬರ್-2023 | 1,08,27,047 | 3,82,62,103 | 627.73 |
| 4 | ಅಕ್ಟೋಬರ್-2023 | 1,10,96,413 | 3,92,74,053 | 644.45 |
| 5 | ನವೆಂಬರ್-2023 | 1,12,12,319 | 3,97,14,391 | 651.72 |
| 6 | ಡಿಸೆಂಬರ್-2023 | 1,12,55,968 | 3,99,25,249 | 655.22 |
| 7 | ಜನವರಿ-2024 (ಚಾಲ್ತಿಯಲ್ಲಿರುತ್ತದೆ) | 1,13,48,463 | 4,02,43,966 | 660.50 |
| | ಒಟ್ಟು | 75836272 | 268895626 | 4411.55 |

ಈ ಹಲವು ಫಲಾನುಭವಿಗಳಿಗೆ ಹಣ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಲ್ಲಾ ಫಲಾನುಭವಿಗಳಿಗೆ ಹಣ ತಲುಪುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಅನ್ನಭಾಗ್ಯ ಯೋಜನೆಯಡಿ ಕುಟುಂಬ ಮುಖ್ಯಸ್ಥರ ಬ್ಯಾಂಕ್ ಖಾತೆಗೆ DBT ( Direct Benefit transfer) ಮೂಲಕ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದ್ದು, ಜಮಾ ಆಗದೇ ಇರುವ ಫಲಾನುಭವಿಗಳಿಗೆ ಹಣ ಪಾವತಿಸಲು ಇಲಾಖೆಯಿಂದ ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.

- ಬ್ಯಾಂಕ್ ಖಾತೆ ಹೊಂದದೆ ಇರುವ ಫಲಾನುಭವಿಗಳ ಮಾಹಿತಿಯನ್ನು ನ್ಯಾಯಬೆಲೆ ಅಂಗಡಿವಾರು ಪಟ್ಟಿಯನ್ನು ಸಿದ್ಧಪಡಿಸಿ, ನ್ಯಾಯಬೆಲೆ ಅಂಗಡಿಯ ಮುಂದೆ ಪ್ರದರ್ಶಿಸಲು ಕ್ರಮಕೈಗೊಳ್ಳಲಾಗಿದೆ.
- ಬ್ಯಾಂಕ್ ಖಾತೆ ಹೊಂದದೇ ಇರುವ ಫಲಾನುಭವಿಗೆ ಹತ್ತಿರದ ಬ್ಯಾಂಕ್

| | | |
|---|---|---|
| | | ಅಥವಾ ಅಂಚೆ ಕಛೇರಿಯಲ್ಲಿ ಬ್ಯಾಂಕ್ ಖಾತೆಯನ್ನು ತೆರೆಯಲು ಸಹಾಯ ಮಾಡಲಾಗಿದೆ.<br>• ರಾಜ್ಯದಲ್ಲಿ ಜುಲೈ-2023 ಮಾಹೆಯಿಂದ ಜನವರಿ-2024ರ ಮಾಹೆಯವರೆಗೆ ಒಟ್ಟು 296,000 ಗಳ IPPB (India Post Payment Bank Accounts) ಖಾತೆಯನ್ನು ತೆರೆದು ಕ್ರಮವಹಿಸಲಾಗಿದೆ.<br>• ವಂಚಿತ ಅರ್ಹ ಫಲಾನುಭವಿಗಳಿಗೆ ಇಕೆವೈಸಿ ಮಾಡಿಸಲು ಇಲಾಖೆಯಿಂದ ಸೂಕ್ತ ಮಾರ್ಗದರ್ಶನ ನೀಡಿ ಕ್ರಮಕೈಗೊಳ್ಳಲಾಗಿದೆ.<br>• NPCI ಚೆಕ್ ವಿಫಲವಾಗಿರುವ ಫಲಾನುಭವಿಗಳನ್ನು NPCI ಮಾಡಿಸಲು ಫಲಾನುಭವಿಗಳಿಗೆ ಜಾಗೃತಿ ಮೂಡಿಸಲಾಗಿರುತ್ತದೆ.<br>• ಅಂತ್ಯೋದಯ ಅನ್ನ/ ಆದ್ಯತಾ ಪಡಿತರ ಚೀಟಿದಾರರಿಗೆ ಸರ್ಕಾರದ ಮಹತ್ತರದ ಅನ್ನಭಾಗ್ಯ ಯೋಜನೆಯ ಕುರಿತು IEC ಮೂಲಕ ಪ್ರಚಾರ ಮಾಡಲು ಕ್ರಮಕೈಗೊಳ್ಳಲಾಗಿದೆ |

ಆನಾಸ 52 ಡಿಆರ್ಎ 2024

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು